**ಸಾಕ್ಷಿಯನ್ನು ದಿನಾಂಕಃ 05.07.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಎಫ್.ಪಿ 7 ಮತ್ತು 8 ನೇ ಪ್ರತಿವಾದಿ ಪರ ವಕೀಲರಿಂದಃ**

1991 ನೇ ಇಸ್ವಿಯಲ್ಲಿ ಆದ ಮ್ಯೂಟೇಷನ್ ಎಂಟ್ರಿ ಸಂಖ್ಯೆ 510 ನ್ನು ಮೋಸದಿಂದ ಮಾಡಿಸಿಕೊಂಡಿರುತ್ತಾರೆ ಎಂದು ನಾವು ಹೇಳಿರುತ್ತೇವೆ ಎಂದರೆ ಹೌದು. ಯಾರು ಯಾರಿಗೆ ಯಾವ ರೀತಿಯಲ್ಲಿ ಮೋಸ ಮಾಡಿರುತ್ತಾರೆಂದು ಎಂದರೆ , ಸಾಕ್ಷಿ 7 ಮತ್ತು 8 ನೇ ಪ್ರತಿವಾದಿಗಳು ನಮ್ಮ ಅಜ್ಜನಿಗೆ ಮೋಸ ಮಾಡಿರುತ್ತಾರೆ, ನಮ್ಮ ಅಜ್ಜ ಜಮೀನನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ದಾವೆಯಲ್ಲಾಗಲೀ ಅಥವಾ ಸಾಕ್ಷಿಯಲ್ಲಾಗಲೀ ನಾನು ನುಡಿದಿದ್ದೇನೆಯೇ ಎಂದರೆ , ದಾವೆಯಲ್ಲಿ ಹೇಳಿದ್ದೇವೆ. ಈ ಬಗ್ಗೆ ನಾನು ದಾವೆಯಲ್ಲಾಗಲೀ ಅಥವಾ ಸಾಕ್ಷಿಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ , ದಾವೆಯಲ್ಲಿ ಹೇಳಿದ್ದೇವೆ ಎಂದು ನುಡಿಯುತ್ತಾರೆ. 7 ಮತ್ತು 8 ನೇ ಪ್ರತಿವಾದಿಗಳು ನಮ್ಮ ಘರಾನೆಗೆ ಸಂಬಂಧಪಟ್ಟವರಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ಆದರೆ ಖರೀದಿ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸ.ನಂ. 72/1 ನೇದನ್ನು ನಮ್ಮ ಅಜ್ಜ 7 ಮತ್ತು 8 ನೇ ಪ್ರತಿವಾದಿಗಳಿಗೆ ಒತ್ತೆ ಹಾಕಿದ್ದರು ಎಂದು ನಾವು ಹೇಳಿರುತ್ತೇವೆ ಎಂದರೆ ಹೌದು. ಜಮೀನನ್ನು ಎಷ್ಟು ವರ್ಷಕ್ಕೆ ಮತ್ತು ಎಷ್ಟು ಮೊತ್ತಕ್ಕೆ ಒತ್ತೆ ಹಾಕಿದ್ದರು ಎನ್ನುವ ಬಗ್ಗೆ ನನಗೆ ಏನಾದರೂ ಮಾಹಿತಿ ಇದೆಯೇ ಎಂದರೆ , 4 ವರ್ಷಕ್ಕೆ ಮೌಖಿಕವಾಗಿ ಒತ್ತೆ ಹಾಕಿದ್ದರು ಎಂದು ನುಡಿಯುತ್ತಾರೆ. ಯಾವ ವರ್ಷ ಒತ್ತೆ ಹಾಕಿರುತ್ತಾರೆ ಎಂದರೆ , 1989 ಎಂದು ನುಡಿಯುತ್ತಾರೆ.

ಸದರಿ 4 ವರ್ಷಗಳ ನಂತರ 7 ಮತ್ತು 8 ನೇ ಪ್ರತಿವಾದಿಯರಿಂದ ಜಮೀನನ್ನು ಬಿಡಿಸಿಕೊಳ್ಳಲು ಈವರೆಗೂ ನಾವು ಪ್ರಯತ್ನಿಸಿರುತ್ತೇವೆಯೇ ಎಂದರೆ , ಸಾಕ್ಷಿ ಜಮೀನು ನಮ್ಮ ಅಜ್ಜನವರದೆಂದು ನಾವು ಸುಮ್ಮನೇ ಇದ್ದೇವು. ನನ್ನ ಅಜ್ಜ ಜಾನುರವರು 7 ಮತ್ತು 8 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟ ಕ್ರಯಪತ್ರ ನೋಂದಣಿಯಾಗಿರುತ್ತದೆ ಎಂದರೆ, ನೋಂದಣಿಯಾಗಿರುತ್ತದೆ ಆದರೆ ಅದನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ 1 ನೇ ವಾದಿಯ ತಂದೆ ಎಂದರೆ ಹೌದು. ಜಾನುರವರ ಹಿರಿಯ ಮಗ ಜಿಮ್ಮು ಎಂದರೆ ಹೌದು. ಮೂಲ ಪುರುಷನ ಕೊನೆಯ ಮಗ ವಾಗು ಎಂದರೆ ಹೌದು. ಜಿಮ್ಮುರವರು ಸಾಕ್ಷಿಯಾಗಿ ಕ್ರಯಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ , ಸಾಕ್ಷಿ ಅವರು ಸಹಿ ಮಾಡಿರುವುದಿಲ್ಲ ಮತ್ತು ಸಹಿ ಮಾಡಲು ಅವರಿಗೆ ಅಧಿಕಾರ ಇರುವುದಿಲ್ಲ ಎಂದು ನುಡಿಯುತ್ತಾರ ಅದೇ ರೀತಿ ವಾಗುರವರು ಸಹ ಕ್ರಯಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ, ಅವರು ಸಹಿ ಮಾಡಿರುವುದಿಲ್ಲ ಎಂದು ನಮ್ಮ ತಂದೆಯವರು ಹೇಳಿರುತ್ತಾರೆ. ಜಿಮ್ಮು ಮತ್ತು ವಾಗು ಸಾಕ್ಷಿ ಸಹಿಯನ್ನು ಮಾಡಿರುವುದರಿಂದ , ವಾದಿಯರಿಗೆ ಕ್ರಯಪತ್ರವನ್ನು ಪ್ರಶ್ನಿಸುವ ಅಧಿಕಾರ ಇರುವುದಿಲ್ಲ ಎಂದರೆ, ಅವರು ನೋಂದಣಾಧಿಕಾರಿಯವರ ಕಚೇರಿಗೆ ಹೋಗಿರುವುದಿಲ್ಲ ಮತ್ತು ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ ಸರ್ವೇ ನಂಬರ್ 72/1 ಯಾರ ಹೆಸರಿನಲ್ಲಿದೆ ಎಂದು ಹೇಳಬಹುದು ಎಂದರೆ , 8 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

2013 ರ ಏಪ್ರೀಲ್ ತಿಂಗಳಿನಲ್ಲಿ 7 ನೇ ಪ್ರತಿವಾದಿ 8 ನೇ ಪ್ರತಿವಾದಿಯ ಪರವಾಗಿ ನೋಂದಾಯಿತ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ , ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ಊರಿಗೆ ಬಂದು ಹೋಗಿ ಮಾಡುತ್ತಿದ್ದ ಕಾರಣ 1991 ನೇ ಇಸ್ವಿಯಿಂದಲೇ 7 ಮತ್ತು 8 ನೇ ಪ್ರತಿವಾದಿಗಳು ಸ.ನಂ 72/1 ನೇದರ ಕಬ್ಜೆಯಲ್ಲಿ ಇದ್ದ ಬಗ್ಗೆ ನಮಗೆ ತಿಳಿದಿರುತ್ತದೆ ಎಂದರೆ , ಸಾಕ್ಷಿ ನಾವು ಬಂದಿರುವುದೇ ಇಲ್ಲ , ನಾವು ತಟ್ಟಿಹಳ್ಳಿಯಲ್ಲಿ ಇದ್ದೇವು , ನಮ್ಮ ತಂದೆಯವರಿಗೆ ಹುಷಾರಿರಲಿಲ್ಲ , ನಾವು ಆಸ್ಪತ್ರೆಗೆ ಓಡಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಆದ

ಕಾರಣ ನಮ್ಮ ದಾವೆ ಕಾಲಪರಿಮಿತಿಯಿಂದ ಬಳಲುತ್ತಿದ್ದೆ ಎಂದರೆ , ನಾವು ಕ್ರಯಪತ್ರಕ್ಕೆ ಪಕ್ಷಗಾರರು ಇರುವುದಿಲ್ಲ ಎಂದು ನುಡಿಯುತ್ತಾರೆ. ಆಗಿನಿಂದಲೂ 7 ಮತ್ತು 8 ನೇ ಪ್ರತಿವಾದಿ ಸ.ನಂ 72/1 ನೇದರ ಮೇಲೆ ಸಾಲವನ್ನು ಪಡೆದು ತೀರಿಸುತ್ತಾ ಬಂದಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಾನು ಮತ್ತು ನಮ್ಮ ಕುಟುಂಬದ ಸದಸ್ಯರು ಅಂದರೇ ಉಳಿದ ಪ್ರತಿವಾದಿಗಳು ಸೇರಿ ಹೇಗಾದರೂ ಮಾಡಿ 7 ಮತ್ತು 8 ನೇ ಪ್ರತಿವಾದಿಯರ ಹೆಸರಿನಲ್ಲಿರುವ ಆಸ್ತಿಯನ್ನು ಕಬಳಿಸುವಬೇಕೆಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಸಾಲವನ್ನು ಪಡೆದುಕೊಳ್ಳುವ ಸಲುವಾಗಿ ಕ್ರಯಪತ್ರವನ್ನು ಬ್ಯಾಂಕಿನಲ್ಲಿ ಅಡವಿಟ್ಟಿರುತ್ತಾರೆ ಎಂದರೆ , ನನಗೆ ಮಾಹಿತಿ ಇಲ್ಲ.

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**